ಶ್ರೀ ಜಗದೀಶ್ ಶೆಟ್ಟರ್:- ಕಾರವಾರ ರಸ್ತೆಯಲ್ಲಿ ಹೂಳು ಹಾಕುತ್ತಿದ್ದಾರೆ. ಅದು ನಾರುತ್ತಿದೆ ಅದನ್ನು ರಸ್ತೆಬದಿಗೆ ಹಾಕಬೇಕು.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್:-ಆದರ ಬಗ್ಗೆ ಗಮನಿಸುತ್ತೇನೆ.

ಬಾಗಲಕೋಟೆ ಜಿಲ್ಲೆಯ ಇಳಕಲ್-ಹುನಗುಂದ ಅವಳಿ ನಗರಗಳಿಗೆ ಕುಡಿಯುವ ನೀರು ಸರಬರಾಜು.

242 (1641)

ಶ್ರೀ.ಪೂಜಾರಿ ಪ್ರಹ್ಲಾದ್ ಹುನುಮಂತಪ್ಪ (ಬಾಗಲಕೋಟೆ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಬಾಗಲಕೋಟೆ ಜಿಲ್ಲೆಯ ಇಳ್‌ಕಲ್ ಹುನಗುಂದ ಅವಳಿ ನಗರಗಳಿಗೆ ಧನ್ನೂರ ಬಳಿಯ ಕೃಷ್ಣ ನದಿಯಿಂದ ನೀರು ಪೂರೈಸುವ ಯೋಜನೆ ಎಂದಿನಿಂದ ಪ್ರಾರಂಭವಾಯಿತು?
2. ಈ ಯೋಜನೆಯ ಅಂದಾಜು ವೆಚ್ಚವೆಷ್ಟು? ಇಲ್ಲಿಯವರೆಗೆ ಮಾಡಲಾದ ವೆಚ್ಚವೆಷ್ಟು? ಶೇಕಡಾವಾರು ಮುಗಿದಿರುವ ಕೆಲಸವಷ್ಟು?
3. ಈ ಯೋಜನೆಯನ್ನು ಪೂರ್ಣಗೊಳಿಸುಲು ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ಎಂ.ಎಸ್.ಪಾಟೀಲ್ (ನಗರಾಭಿವೃದ್ಧಿ ಸಚಿವರು.) :

1. ಈ ಯೋಜನೆಗೆ ಸರ್ಕಾರ ದಿನಾಂಕ 30.3.90ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ. ಈ ಯೋಜನೆಯ ಮುಖ್ಯ ಕಾಮಗಾರಿಯಾದ ಕೊಳವೆ ಮಾರ್ಗವನ್ನು ಹಾಕುವ ಕೆಲಸ 1992ರಿಂದ ಪ್ರಾರಂಭಿಸಲಾಯಿತು.
2. ಮಂಜೂರಾದ ಯೋಜನೆಯ ಅಂದಾಜು ವೆಚ್ಚವು ರೂ.355.00 ಲಕ್ಷಗಳು. ಇಲ್ಲಿಯವರೆಗೆ ರೂ. 516.83 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಶೇಕಡಾವಾರು ಸುಮಾರು 75ರಷ್ಟು ಕೆಲಸಗಳು ಮುಗಿದಿವೆ.
3. ಹುನುಗುಂದ ಪಟ್ಟಣಕ್ಕೆ ಸಧ್ಯದಲ್ಲೇ ನೀರು ಸರಬಹಾಜು ಮಾಡಲಾಗುವುದು. ಇಳ್‌ಕಲ್ ಪಟ್ಟಣದ ಯೋಜನೆಯನ್ನು ಆಗಸ್ಟ್ 99ರೊಳಗೆ ಚಾಲ್ತಿಗೊಳಿಸಲಾಗುವುದು.

ಶ್ರೀ ಪೂಜಾರಿ ಪ್ರಹ್ಲಾದ ಹನುಮಂತಪ್ಪ:- ಇಳ್‌ಕಲ್ ಮತ್ತು ಹುನಗುಂದ ಅವಳಿ ನಗರಗಳು ಬಾಗಲಕೋಟೆಯಲ್ಲೇ ದೊಡ್ಡ ನಗರಗಳು. 1992ರಿಂದ ನೀರು ಒದಗಿಸುವ ಯೋಜನೆ ಪ್ರಾರಂಭಿಸಿದಾಗ, ಸಚಿವರು ಇವತ್ತಿನವರೆಗೆ 75 ಪರ್ಸೆಂಟ್ ಕೆಲಸವಾಗಿದೆ ಎನ್ನುತ್ತಿದ್ದಾರೆ. 516 ಲಕ್ಷ ರೂಪಾಯಿಗಳ ಯೋಜನೆ ಮುಂದುವರೆದಿದ್ದು, 355 ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದು ವರದಿ ಕೊಡುತ್ತಿದ್ದಾರೆ. ಅಲ್ಲಿ 30 ಪರ್ಸೆಂಟ್ ಕೆಲಸ ಇಲ್ಲಿಯವರೆಗೆ ಆಗಿಲ್ಲ. ಆ ಎರಡು ನಗರಗಳಲ್ಲಿ ಪ್ರತಿನಿತ್ಯ ನೀರಿಗಾಗಿ ಹಾಹಾಕಾರ ನಡೆಯುತ್ತಿದೆ. ಇಳ್‌ಕಲ್ ನಗರಕ್ಕೆ 99ನೇ ಇಸವಿಯಲ್ಲಿ ನೀರಿನ ಯೋಜನೆ ಜಾರಿಗೊಳಿಸಲಾಗುವುದೆಂದು ಸಚಿವರು ಉತ್ತರಿಸಿದ್ದಾರೆ. ಇದನ್ನು ನಾನು ನಂಬಲಿಕ್ಕೆ ಆಗುತ್ತಿಲ್ಲ. ಸರಿಯಾದ ವಿವರಣೆ ನೀಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್:- ಆಗಿರುವ ಕೆಲಸದ ಬಗ್ಗೆ ಮಾಹಿತಿ ಕೊಟ್ಟಿದ್ದೇನೆ. ಸರಿಯಾಗಿ ಕೆಲಸ ಆಗಿಲ್ಲವೆನ್ನುವ ಮಾಹಿತಿ ಅವರ ಹತ್ತಿರ ಇದ್ದು, ಕೊಟ್ಟರೆ ವಿಚಾರಣೆ ಮಾಡಬಹುದು. 75 ಪರ್ಸೆಂಟ್ ಕೆಲಸ ಆಗಿದ್ದು, ಸುಮಾರು 516ಲಕ್ಷ ರೂಪಾಯಿ ಖರ್ಚಾಗಿದೆ. ನಾನು ಸ್ವತಃ ಕೆಲಸವನ್ನು ವೀಕ್ಷಿಸಿದ್ದೇನೆ. ಬಾಗಲಕೋಟೆ ಮತ್ತು ಆ ನಗರಗಳಲ್ಲಿ ನೋಡಿ ಬಂದಿದ್ದು, ಈ ಯೋಜನೆಯನ್ನು ಆಗಸ್ಟ್‌ನಲ್ಲಿ

ಪೂರ್ಣ ಮಾಡುತ್ತೇವೆಂಬ ವಿಶ್ವಾಸ ನಮಗಿದೆ. ಅದಕ್ಕೆ ವ್ಯತಿರಿಕ್ತ ಕೆಲಸವಾಗಿರುವ ಬಗ್ಗೆ ತಮ್ಮ ಹತ್ತಿರ ಮಾಹಿತಿ ಇದ್ದರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಭಟ್ಕಳ ಕ್ಷೇತ್ರದಲ್ಲಿ ಹಿಂದುಳಿದ ವರ್ಗದವರಿಗಾಗಿ ವಸತಿನಿಲಯ ಸ್ಥಾಪನೆ

243 (1667)

ಶ್ರೀ ಶಿವಾನಂದ ನಾಯಕ್(ಭಟ್ಕಳ) ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಭಟ್ಕಳ ಕ್ಷೇತ್ರದಲ್ಲಿ ಹಿಂದುಳಿದ ವರ್ಗದವರಿಗಾಗಿ ಎಲ್ಲೆಲ್ಲಿ ವಸತಿ ನಿಲಯಗಳನ್ನು ಸ್ಥಾಪಿಸಲಾಗಿದೆ. (ಬಾಲಕರು ಮತ್ತು ಬಾಲಕಿಯರು ಸೇರಿದಂತೆ)

(ಆ) ಯಾವ ಯಾವ ವಸತಿನಿಲಯಗಳು ಸ್ವಂತ ಕಟ್ಟಡ ಹೊಂದಿವೆ? ಸ್ವಂತ ಕಟ್ಟಡಗಳು ಹಾಗೂ ಬಾಡಿಗೆ ಕಟ್ಟಡಗಳು ಸುಸ್ಥಿತಿಯಲ್ಲಿವೆಯೆ?

(ಇ) ವಸತಿನಿಲಯ ಕಟ್ಟಡಗಳ ರಿಪೇರಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

(ಈ) 1999-2000ನೇ ಸಾಲಿನಲ್ಲಿ ಹೊಸದಾಗಿ ನಿಲಯ ಪ್ರಾರಂಭಿಸಲು ಉದ್ದೇಶಿಸಲಾಗಿರುವ ಸ್ಥಳಗಳಾವುವು?

ಶ್ರೀ. ಮಾಲೀಕಯ್ಯ ವಿ.ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು):

(ಅ) ಭಟ್ಕಳ ಕ್ಷೇತ್ರದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಇಲಾಖೆಯ ವಿದ್ಯಾರ್ಥಿನಿಲಯಗಳಿರುತ್ತವೆ.

1) ಮೆಟ್ರಿಕ್‌ಪೂರ್ವ ಬಾಲಕರ ನಿಲಯ ಭಟ್ಕಳ.
2) ಮೆಟ್ರಿಕ್ ಪೂರ್ವ ಬಾಲಕರ ನಿಲಯ ಮುರ್ಡೇಶ್ವರ.
3) ಮೆಟ್ರಿಕ್ ಪೂರ್ವ ಬಾಲಕರ ನಿಲಯ ಮಂಕಿ
4) ಮೆಟ್ರಿಕ್ ಪೂರ್ವ ಬಾಲಕರ ನಿಲಯ ಇಡಗುಂಜಿ
5) ಮೆಟ್ರಿಕ್ ಪೂರ್ವಬಾಲಕರ ನಿಲಯ ಖಿರ್ವಾ
6) ಮೆಟ್ರಿಕ್ ಪೂರ್ವ ಬಾಲಕರ ನಿಲಯ ಜಲವಳ್ಳಿ
7) ಮೆಟ್ರಿಕ್ ಪೂರ್ವ ಬಾಲಕಿಯರ ನಿಲಯ ಮಂಕಿ

(ಆ) ಈ ಪೈಕಿ ಈ ಕೆಳಕಂಡ ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡದಲ್ಲಿ ನಿರ್ವಹಿಸಲಾಗುತ್ತಿದೆ.

1) ಮೆಟ್ರಿಕ್ ಪೂರ್ವ ಬಾಲಕಿಯರ ನಿಲಯ, ಮಂಕಿ.
2) ಮೆಟ್ರಿಕ್ ಪೂರ್ವ ಬಾಲಕರ ನಿಲಯ ಖಿರ್ವಾ.

ಬಾಡಿಗೆ ಹಾಗೂ ಸ್ವಂತ ಕಟ್ಟಡಗಳು ಸುಸ್ಥಿತಿಯಲ್ಲಿದೆ.

(ಇ) ವಿದ್ಯಾರ್ಥಿನಿಲಯಗಳ ನಿರ್ಮಾಣ ಹಾಗೂ ದುರಸ್ತಿಗಾಗಿ ಉತ್ತರ ಕನ್ನಡ ಜಿಲ್ಲೆಗೆ ಜಿಲ್ಲಾ ಆಯವ್ಯಯದಲ್ಲಿ ರೂ.10.50 ಲಕ್ಷಗಳ ಹಣದ ಅವಕಾಶ ಮಾಡಲಾಗಿರುತ್ತದೆ. ಅವಶ್ಯವಿದ್ದಲ್ಲಿ ಸದರಿ ಮೊತ್ತದಲ್ಲಿ ಸೂಕ್ತ ದುರಸ್ತಿ ಮಾಡಲಾಗುವುದು.

(ಈ) ಸರ್ಕಾರದ ಪರಿಶೀಲನೆಯಲ್ಲಿದ್ದು ಸದ್ಯದಲ್ಲೇ ತೀರ್ಮಾನ ಕೈಗೊಳ್ಳಲಾಗುವುದು.

ಶ್ರೀ ಶಿವಾನಂದ ನಾಯ್ಕ್:- ಸಚಿವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಚಿವರ ದೃಷ್ಟಿಯಲ್ಲಿ ಸೋರುತ್ತಿರುವ ಕಟ್ಟಡಗಳೆಲ್ಲಾ ಸುಸ್ಥಿತಿಯಲ್ಲಿದೆ ಎಂದು ಕಾಣುತ್ತದೆ. ಮೊನ್ನೆ ನಾನು ಮಂಕಿ ಮತ್ತು ಖಿರ್ವಾ, ಮುರ್ಡೇಶ್ವರ ಹಾಸ್ಟೆಲ್‌ಗಳಿಗೆ ಹೋಗಿ ನೋಡಿದ್ದೇನೆ. ಮಳೆ ನೀರು ಬಂದು ಎಲ್ಲಾ